780 ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ–218ನ್ನು ಚತುಷ್ಪಥ ರಸ್ತೆಯನ್ನಾಗಿ ಪರಿವರ್ತನೆ ಮಾಡುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆಯನ್ನು ಪರಿವರ್ತನೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು;

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ರಾಷ್ಟ್ರೀಯ ಹೆದ್ದಾರಿ–218ನ್ನು ಚತುಷ್ಪಥ ರಸ್ತೆಯನ್ನಾಗಿ ಪರಿವರ್ತನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

780 Sri Bellubbi Sangappa Kallappa : Hon'ble Minister for Public Works kindly answer to the below question?

a) Whether it has come to the notice of the Government to convert NH-218 into four lane road.

b) If so, what action will be taken by the Government to covert this road?

Sri.C.M. UDASI (Minister for Public Works Department) :

a) There is no proposal before the Government to convert NH-218 into four lanes.

b) Does not arise.

781 ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ–13, ಮನಗೊಳಿ ಹಾಗೂ ರಾಷ್ಟ್ರೀಯ ಹೆದ್ದಾರಿ–218ರ ಮಧ್ಯದಲ್ಲಿ ಬರುವ ಮುಳವಾಡ ರೈಲ್ವೆ ಸ್ಟೇಷನ್‌ಗೆ ಸಂಬಂಧಿಸಿದ ಸುಮಾರು 1 ಕಿ.ಮೀ. ರಸ್ತೆಯು ಹದಗೆಟ್ಟಿದ್ದು, ಅದನ್ನು ಅಭಿವೃದ್ಧಿಪಡಿಸುವ ಸಲುವಾಗಿ ರೈಲ್ವೆ ಇಲಾಖೆಯಿಂದ ಅನುಮತಿ ಪಡೆಯಲು ಹಾಗೂ ರಾಜ್ಯ ಸರ್ಕಾರದಿಂದ ಈ ರಸ್ತೆಯನ್ನು ಅಭಿವೃದ್ಧಿಪಡಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ರಾಷ್ಟ್ರೀಯ ಹೆದ್ದಾರಿ–13, ಮನಗೂಳಿ ಹಾಗೂ ರಾಷ್ಟ್ರೀಯ ಹೆದ್ದಾರಿ–218ರ ಮಧ್ಯದಲ್ಲಿ ಬರುವ ರಸ್ತೆಯ ಅಭಿವೃದ್ಧಿಯನ್ನು ಆರ್ಥಿಕ ಪ್ರಾಮುಖ್ಯತೆ ಯೋಜನೆಯಡಿಯಲ್ಲಿ ಕೋಲಾರದಿಂದ ಮುತ್ತಗಿ ಕ್ರಾಸ್‌ವರೆಗೆ ಕಿಮೀ. 8.5 ರಿಂದ ಕಿಮೀ.21.50 ವರೆಗೆ ರೂ.300.00 ಲಕ್ಷಗಳ ಅಂದಾಜನ್ನು ಸಿದ್ದಪಡಿಸಿ ದಿನಾಂಕ: 13–5–2009ರಲ್ಲಿ ಕೇಂದ್ರ ಭೂಸಾರಿಗೆ ಮಂತ್ರಾಲಯ ಇವರಿಗೆ ಮಂಜೂರಾತಿಗಾಗಿ ಸಲ್ಲಿಸಲಾಗಿದೆ. ಈ ಅಂದಾಜಿನಲ್ಲಿ ಈ ಭಾಗವು ಸೇರಿರುತ್ತದೆ. ಈ ಕಾಮಗಾರಿಯನ್ನು ಮಂಜೂರಾತಿಯ ನಂತರ ಶೀಘ್ರವಾಗಿ ಕೈಗೊಳ್ಳಲಾಗುವುದು.

781 Sri. Bellubbi Sangappa Kallappa : Hon'ble Minister for Public Works kindly answer to the below question?

a) As it comes to the notice of the Government that the stretch of about 1.00 Km length near Railway Station whoch is between Mangooli on NH-13 and NH-218 (Mulwada) is damaged. The Railway department has been addressed by the State PWD for their concurrence to taken up the improvement work.

b) If so, the details there of along with the steps taken by the Government in this regard.

Sri C.M.UDASI (Minister for Public works) :

a) Yes.

b) As estimate amounting to Rs.300.00 lakhs for improvements from Kolar-Muttagi cross from km 8.50 to km 21.50 has been submitted to the MoSRT&H, New Delhi on 13-5-2009 for approval under E&I scheme. The stretch in the question is included in this estimate. The work will be commenced after estimate is approved by the Ministry.

766 ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ ಕ್ಷೇತ್ರ) : ಮಾನ್ಯ ಸಣ್ಣ ನೀರಾವರಿ, ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಂಜುಂಡಪ್ಪ ವರದಿಯಂತೆ 2008–09ನೇ ಸಾಲಿನಲ್ಲಿ ಎಷ್ಟು ಹಣ ನಿಗದಿಯಾಗಿತ್ತು, ಹಾಗೂ ಮಾರ್ಚ್ 31 ರವರೆಗೆ ಖರ್ಚಾದ ಹಣವೆಷ್ಟು; (ಇಲಾಖಾವಾರು ವಿವರ ನೀಡುವುದು);